ಅ) ಹಾಗಿದ್ದಲ್ಲಿ ಇದು ಹರಡದಂತೆ ತಡೆಯಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಚ್.ಎಲ್. ತಿಮ್ಮೇಗೌಡ (ಆರೋಗ್ಯ ಮಂತ್ರಿ ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಬಂದಿದೆ,

ಆ) ರೋಗದ ಲಕ್ಷಣಗಳನ್ನು ತೋರಿಸುವ ಹಾಗೂ ಸಂಶಯಕ್ಕೆ ಒಳಪಟ್ಟ ವ್ಯಕ್ತಿಗಳಿಗೆ ತೀರ್ಥಹಳ್ಳಿಯ ಸಾರ್ವಜನಿಕ ಆಸ್ಪತ್ರೆಯಲ್ಲಿ ಔಷಧೋಪಚಾರ ಹಾಗೂ ಒಳರೋಗಿಗಳ ಚಿಕಿತ್ಸೆಗೆ ಸೂಕ್ತ ವ್ಯವಸ್ಥೆ ಏರ್ಪಡಿಸಲಾಗಿದೆ.

ದೇವಂಗಿ ಪ್ರಾಥಮಿಕ ಆರೋಗ್ಯ ಕೇಂದ್ರದ ಮತ್ತು ಇತರ ಆರೋಗ್ಯ ಕಾರ್ಯಕರ್ತರು ಮತ್ತು ಸಾಗರ ಕೆ.ಎಫ್.ಡಿ. ಕ್ಷೇತ್ರ ಶಾಣೆಯ ಸಿಬ್ಬಂದಿಯವರು ಗ್ರಾಮಿಣ ಮಟ್ಟದಲ್ಲಿ ಶಂಕಿತ ರೋಗ ಸೂಚನೆ ಕಂಡು ಬರುವ ವ್ಯಕ್ತಿಗಳಿಗೆ ಚಿಕಿತ್ಸೆಯನ್ನು ಕೊಡಲು ವ್ಯವಸ್ಥೆ ಮಾಡಲಾಗಿದೆ.

ಮಂಗ ಸತ್ತಿರುವ ಪ್ರದೇಶದಲ್ಲಿ ಉಣ್ಣೆ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲಾಗಿದೆ.

Construction of Ranga Mandir at Mysore

93 SRI B. BASAVALINGAPPA (Yelahanka) will the Minister of State for Information, Youth Service, Sports and Tourism be pleased to state.—

a) Cost of construction of Ranga mandira constructed for holding Vishwa Kannada Sammelana in Mysore.

b) Total expenditure incurred on all the buildings including Rangamandira.

c) Total expenditure incurred on printing of books published on the occasion ?

SRI JEEVARAJ ALVA (Minister of State for Information, Tourism Youth services and Sports).—

a) Rs. 2,77,61,730-00

b) Rs. 4,41,46,212-00

c) Rs. 35,59,843-00

Medical Plants in the State

50 SMT. LEELA DEVI PRASAD (Athani) will the Minister for Health and Family Welfare be pleased to state.—

a) Whether Government are aware that Karnataka is rich in medicinal plants in its Forests ?

b) If so, the efforts made for the collection, transportation, and reservation of these herbs ?

c) The number of Research Projects started for the above purpose ?

SRI H. L. THIMME GOWDA (Minister for Health and Family Welfare) –

a) Yes.

b) At present, there is no such scheme.

c) Nil.

NOTE FOR SUPPLEMENTARY

At present there is no such scheme in this Department. This will be considered in the 7th Five Year Plan.

ಹರಿಹರ ತಾಲ್ಲೂಕಿನಲ್ಲಿ ಆಸ್ಪತ್ರೆಯ ಕಟ್ಟಡಗಳು

೩೮೯. ಶ್ರೀ ಬಿ.ಜಿ. ಕೊಟ್ರಪ್ಪ ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹರಿಹರ ತಾಲ್ಲೂಕಿನಲ್ಲಿ ಆಸ್ಪತ್ರೆ ಕಟ್ಟಡಗಳು ಪೂರ್ತಿಗೊಂಡು ಪ್ರಾರಂಭವಾಗದೆ ಇರುವ ಕಟ್ಟಡಗಳೆಷ್ಟು ?

ಶ್ರೀ ಎಚ್.ಎಲ್. ತಿಮ್ಮೇಗೌಡ (ಆರೋಗ್ಯ ಸಚಿವರು).—

ಅ) ಒಂದೂ ಇಲ್ಲಾ.

ಶ್ರೀ ಬಿ.ಜಿ. ಕೊಟ್ರಪ್ಪ —ಕನ್ನಡದಲ್ಲಿ ಪ್ರಶ್ನೆ ಕೇಳಿದ್ದು ಆಸ್ಪತ್ರೆ ಕಟ್ಟಡಗಳು ಪೂರ್ಣವಾಗಿ ಪ್ರಾರಂಭವಾಗದೇ ಇರುವುದು ಎಷ್ಟು ಎಂದು ಕೇಳಿದ್ದೆ.

ಆದು ಇಂಗ್ಲಿಷ್‌ನಲ್ಲಿ How many buildings are not functioning out of the completed Hospital Buildings ? ಎಂದು ಇದೆ, ಆ ಜಾಗದಲ್ಲಿ ಮೂರು ಬಿಲ್ಡಿಂಗಗಳು ರೆಡಿಯಾಗಿದೆ. ಮೂರು ಬಿಲ್ಡಿಂಗ್‌ಗಳು ಹೊಸದಾಗಿ ತಯಾರಾಗಿದೆ. ಆಸ್ಪತ್ರೆಗಳನ್ನು ಹೊಸ ಬಿಲ್ಡಿಂಗ್‌ಗೆ ಷಿಫ್ಟ್ ಮಾಡುವುದಕ್ಕೆ ಕೇಳಿಕೊಂಡಿದ್ದೇವೆ. ಸನ್ಮಾನ್ಯ ಆರೋಗ್ಯ ಸಚಿವರು ಫೆಬ್ರುವರಿ ತಿಂಗಳಲ್ಲಿ ಬರುತ್ತೇನೆ ಎಂದು ಹೇಳಿದ್ದರು. ಇದುವರೆಗೂ ಏನೂ ಆಗಿಲ್ಲ.

ಶ್ರೀ ಹೆಚ್.ಎಲ್ ತಿಮ್ಮೇಗೌಡ.—ಪ್ರಶ್ನೆ ಸರಿ ಇಲ್ಲದೇ ಇದ್ದುದರಿಂದ ಆ ರೀತಿ ಉತ್ತರವನು ಕೊಟ್ಟಿದ್ದೇವೆ. ಆ ಬಿಲ್ಡಿಂಗ್‌ಗಳನ್ನು ಆದಷ್ಟು ಬೇಗ ಷಿಫ್ಟ್ ಮಾಡಿ ಮಾಡುವುದಕ್ಕೆ ಪ್ರಯತ್ನವನ್ನು ಮಾಡಿದ್ದೇವೆ. ಆ ಕೆಲಸವನ್ನು ಜಾಗ್ರತೆ ಮಾಡುತ್ತೇವೆಂದು ತಿಳಿಸುತ್ತೇನೆ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ನಿಯಮಾವಳಿ ಪ್ರಕಾರ ಒಂದು ಮನವಿಯನ್ನು ಮಾಡುತ್ತೇನೆ. ಯಾವುದೇ ಸದಸ್ಯರು ಗೈರು ಹಾಜರಾಗಿದ್ದರೆ ಅವರ ಪ್ರಶ್ನೆಯನ್ನು ಕೇಳಲು ಪದಕ್ಕೆ ಅವಕಾಶ ಮಾಡಿ ಕೊಡಬೇಕು. ಅದರಂತೆ ಶ್ರೀ ಮೊಹಮ್ಮದ್ ಮೊಹಿನುದ್ದೀನ್ ರವರ ೯೧ ನೇ ಪ್ರಶ್ನೆಯನ್ನು ಕೇಳುತ್ತೇನೆ. ಮಂತ್ರಿಗಳಿಂದ ಉತ್ತರ ಕೊಡಿಸಬೇಕು ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಅಧ್ಯಕ್ಷರು.—ಉತ್ತರ ರೆಡಿ ಇದೆಯೇ ?

ಶ್ರೀ ಹೆಚ್.ಎಲ್. ತಿಮ್ಮೇಗೌಡ.—ಇದೆ.

ರಾಜ್ಯದ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಸಚಿವರ ಆದೇಶದ ಮೇರೆಗೆ ನೀಡಲಾದ ಸ್ಥಾನಗಳು

೯೧ ವಿಧಾನಸಭಾ ಸದಸ್ಯರಾದ ಶ್ರೀ ಮೊಹಮ್ಮದ್ ಮೊಯಿನುದ್ದೀನ್ ಅವರ ಪರವಾಗಿ ಶ್ರೀ ಕೆ.ಹೆಚ್. ಶ್ರೀನಿವಾಸ್ ಅವರು, ಕೇಳಿದರು